# ಕರ್ನಾಟಕ ಸರ್ಕಾರ

## ಸಕಾಲ ಮಿಷನ್, ಸಿಆಸುಇ

- ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014 ನಾಗರಿಕರಿಗೆ ರಾಜ್ಯಾದ್ಯಂತ 729 ಸೇವೆಗಳನ್ನು ಸರ್ಕಾರದ 61 ಇಲಾಖೆಗಳಿಂದ ಸಮಯ ಬದ್ಧವಾಗಿ ಪಡೆಯಲು ಸಶಕ್ತಿಕರಿಸಿದೆ.







- ಸಕಾಲ ಸೇವೆಗಳಡಿ ಕರ್ನಾಟಕ ರಾಜ್ಯಾದ್ಯಂತ ನಾಗರಿಕರಿಂದ ಇದುವರೆಗೂ 10,81,41,508 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಒಟ್ಟು 10,73,88,032 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

- 2015-16ನೇ ಸಾಲಿನಲ್ಲಿ ಅಟಲ್ ಜನಸ್ನೇಹಿ ಕೇಂದ್ರದಲ್ಲಿ 05 ಸೇವೆಗಳು, ಭೂಮಿ ಮತ್ತು ಯು.ಪಿ.ಆರ್ ಶಾಖೆಯಲ್ಲಿ 04 ಸೇವೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 02 ಸೇವೆಗಳು, ಪಶು ಸಂಗೋಪನೆ ಇಲಾಖೆಯಲ್ಲಿ 06 ಸೇವೆಗಳು, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯಲ್ಲಿ 09 ಸೇವೆಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 05 ಸೇವೆಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯಲ್ಲಿ 02 ಸೇವೆಗಳು, ದಾರ್ಮಿಕ ದತ್ತಿ ಇಲಾಖೆಯಲ್ಲಿ 03 ಸೇವೆಗಳು, ನೊಂದಣಿ ಹಾಗೂ ಮುದ್ರಾಂಕ ಇಲಾಖೆಯಲ್ಲಿ 08 ಸೇವೆಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ 05 ಸೇವೆಗಳು, ಕರ್ನಾಟಕ ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 04 ಸೇವೆಗಳು, ಸಣ್ಣ ನೀರಾವರಿ ಇಲಾಖೆಯ ಅಂತರ್ ಜಲ ನಿರ್ದೇಶನಾಲಯ ಇಲಾಖೆಯ 04 ಸೇವೆಗಳನ್ನು, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 01 ಸೇವೆ ಸೇರಿದಂತೆ ಒಟ್ಟು 13 ಇಲಾಖೆಗಳಲ್ಲಿ 58 ಸೇವೆಗಳನ್ನು ಸಕಾಲದಡಿ ಸೇರಿಸಲಾಗಿದೆ.

- 2015-16ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯ ಹೆಸರಿಸಲಾದ ಅಧಿಕಾರಿಗಳಿಗೆ ರಾಜ್ಯ ಮಟ್ಟದಲ್ಲಿ ತರಬೇತಿ ಕಾರ್ಯಗಾರವನ್ನು ಸಕಾಲ ತರಬೇತಿ ಕೇಂದ್ರ, 11ನೇ ಮಹಡಿ, ವಿಶ್ವೇಶ್ವರಯ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಗಾರದಲ್ಲಿ 250ಕ್ಕೂ ಹೆಚ್ಚು ಅಧಿಕಾರಿಗಳು ಪಾಲ್ಗೊಂಡಿದ್ದು ಸಕಾಲ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಹಾಗೂ ಪ್ರಾಯೋಗಿಕ ತರಬೇತಿಯನ್ನು ಪಡೆದಿರುತ್ತಾರೆ.

- 2015-16ನೇ ಸಾಲಿನಲ್ಲಿ ದೆಹಲಿ ದೂರದರ್ಶನ, ಸಕಾಲ ಯೋಜನೆಯ ಕುರಿತು ಸಾಕ್ಷ್ಯ ಚಿತ್ರವೊಂದನ್ನು ನಿರ್ಮಿಸಿ ಅದನ್ನು ರಾಷ್ಟ್ರ ವ್ಯಾಪಿ ಪ್ರಸಾರ ಮಾಡಿರುವುದು ಸಂತಸದ ವಿಷಯ.

- ಸಕಾಲ ಯೋಜನೆಯ ಯಶಸ್ವಿ ಅನುಷ್ಟಾನಕ್ಕೆ ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಕಾಲ ಯೋಜನೆಯ ಬಗ್ಗೆ ಆಕಾಶವಾಣಿ ಕೇಂದ್ರಗಳ ಮೂಲಕ ಕರ್ನಾಟಕ ರಾಜ್ಯಾದ್ಯಂತ ಒಟ್ಟು 13 ಕಂತುಗಳ ಸರಣಿ ಕಾರ್ಯಕ್ರಮವನ್ನು ಪ್ರಸಾರಮಾಡಿದೆ.

- ದೂರದರ್ಶನದ ಚಂದನ ವಾಹಿನಿಯಲ್ಲಿ ಪ್ರಸಾರವಾದ ಪೋನ್ ಇನ್ ಕಾರ್ಯಕ್ರಮದಲ್ಲಿ ಸಕಾಲ ಮಿಷನ್‌ನ ಅಪರ ಮಿಷನ್ ನಿರ್ದೇಶಕರು ಭಾಗವಹಿಸಿ ನಾಗರಿಕರಿಗೆ ಮಾಹಿತಿಯನ್ನು ಒದಗಿಸಿರುತ್ತಾರೆ. ಇದಲ್ಲದೆ ಫೇಸ್‌ಬುಕ್ ಹಾಗೂ ಟ್ವಿಟರ್ ಖಾತೆಗಳಲ್ಲಿ ನಾಗರಿಕರಿಂದ ಸ್ವೀಕರಿಸಲ್ಪಡುವ ದೂರುಗಳ ನಿರ್ವಹಣೆ ಮಾಡಲಾಗುತ್ತಿದೆ.

- ಸಕಾಲ ಸೇವೆಗಳ ಗುಣಮಟ್ಟವನ್ನು ಉತ್ಕೃಷ್ಟ ದರ್ಜೆಗೇರಿಸುವ ಸಲುವಾಗಿ ಪ್ರಮುಖ ಸೇವೆಗಳನ್ನು ಒದಗಿಸುವ ಸಂಸ್ಥೆಗಳಾದ ಕಂದಾಯ ಇಲಾಖೆ, ಸಾರಿಗೆ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನೊಳಗೊಂಡು ಇಂಟರ್‌ಟೆಕ್ ಸಂಸ್ಥೆಯಿಂದ ISO 9001:2008 ಪ್ರಮಾಣೀಕರಣವನ್ನು ಫೆಬ್ರವರಿ 2016ರಲ್ಲಿ ISO

ಸರ್ವೆಲೆನ್ಸ್ ಆಡಿಟ್ ನಡೆಸಲಾಗಿದ್ದು, ISO 9001:2008 ಪ್ರಮಾಣೀಕರಣವನ್ನು ನವೀಕರಿಸಲಾಗಿದೆ. ಈ ಪ್ರಮಾಣೀಕರಣದ ಅವಧಿಯು ಜನವರಿ 2017ರ ವರೆಗೆ ಚಾಲ್ತಿಯಲ್ಲಿರುತ್ತದೆ.

- ಸಕಾಲ ಕರೆ ಕೇಂದ್ರದಲ್ಲಿ 2015-16ರಲ್ಲಿ ಸುಮಾರು 3.5ಲಕ್ಷಕ್ಕೂ ಹೆಚ್ಚು ಕರೆಗಳನ್ನು ನಾಗರಿಕರಿಂದ ಸ್ವೀಕರಿಸಲಾಗಿದೆ. ಸಕಾಲ ಕರೆ ಕೇಂದ್ರದಲ್ಲಿ ಸಕಾಲಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಒಟ್ಟು 6,491 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಇವುಗಳಲ್ಲಿ 6,276 ಅರ್ಜಿಗಳನ್ನು ವಿಲೇವಾರಿ ಮಾಡಿದೆ. ಸಕಾಲೇತರ ದೂರುಗಳಲ್ಲಿ ಒಟ್ಟು 3,335 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 3,272 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

- ಸಾರ್ವಜನಿಕ ಸೇವೆಗಳ ವಿಲೇವಾರಿಯ ವ್ಯವಸ್ಥೆಯಲ್ಲಿ ಸಾಧಿಸಿದ ನಾವೀನ್ಯತೆಯನ್ನು ಪರಿಗಣಿಸಿ ಸಕಾಲ ಮಿಷನ್‌ಗೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ "ಸಾರ್ವಜನಿಕ ಆಡಳಿತದಲ್ಲಿ ಸಾಧಿಸಿದ ಉತ್ಕೃಷ್ಟತೆಗಾಗಿ ಪ್ರಧಾನ ಮಂತ್ರಿಗಳ ಪ್ರಶಸ್ತಿ"ಯು ಏಪ್ರಿಲ್ 2015ರಲ್ಲಿ ನವದೆಹಲಿಯಲ್ಲಿ ಸಿವಿಲ್ ಸರ್ವಿಸಸ್ ಡೇನ ಪ್ರಯುಕ್ತ ನಡೆದ ಸಮಾರಂಭದಲ್ಲಿ ಪ್ರಾಪ್ತವಾಗಿದೆ. ಇದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸಕಾಲಕ್ಕೆ ಸಂದ ಮನ್ನಣೆಯಾಗಿದೆ.

- ಪ್ರಧಾನ ಮಂತ್ರಿ ಪ್ರಶಸ್ತಿಗೆ ಪ್ರಾಪ್ತವಾಗಿರುವುದನ್ನು ಪರಿಗಣಿಸುತ್ತಾ ಕೇಂದ್ರ ಸರ್ಕಾರದ ಡಿ.ಎ.ಆರ್.ಪಿ.ಜಿ ಸಕಾಲ ಸೇವೆಗಳನ್ನು ಇತರ ರಾಜ್ಯಗಳಿಗೂ ಮಾದರಿಯನ್ನಾಗಿ ಗುರುತಿಸಿರುವ ಹಿನ್ನಲೆಯಲ್ಲಿ ವಿವಿಧ ರಾಜ್ಯಗಳಿಂದ ಸಕಾಲ ಸೇವೆಗಳ ಅಧ್ಯಯನಕ್ಕಾಗಿ ಅಧಿಕಾರಿಗಳ ತಂಡವು ಆಗಮಿಸುತ್ತಲಿದ್ದು, ನವೆಂಬರ್/ಡಿಸೆಂಬರ್ ತಿಂಗಳಿನಲ್ಲಿ ಮಹರಾಷ್ಟ್ರ, ಗೋವಾ, ಛತ್ತಿಸ್‌ಘಡ, ಹಾಗೂ ನಾಗಾಲ್ಯಾಂಡ್ ರಾಜ್ಯದ ತಂಡಗಳು ರಾಜ್ಯಕ್ಕೆ ಭೇಟಿ ನೀಡಿವೆ. ಜೊತೆಗೆ ಯು.ಎನ್.ಡಿ.ಪಿ. ಯವರಿಂದ ಸಂಯೋಜಿಸಲಾದ ಕಾರ್ಯಕ್ರಮದಡಿ ಭೂತಾನ್ ದೇಶದ 11 ಜನ ಐ.ಟಿ. ಅಧಿಕಾರಿಗಳ ತಂಡವು ರಾಜ್ಯಕ್ಕೆ ಭೇಟಿ ನೀಡಿದ್ದು, ಕ್ಷೇತ್ರ ಮಟ್ಟದಲ್ಲೂ ಸಕಾಲದ ಕಾರ್ಯ ವೈಖರಿ ಬಗ್ಗೆ ಅಧ್ಯಯನ ಮಾಡಿರುತ್ತಾರೆ.

- 2015-16ನೇ ಸಾಲಿನಲ್ಲಿ ಡಿ.ಎ.ಆರ್.ಪಿ.ಜಿ, ಭಾರತ ಸರ್ಕಾರ, ಇವರು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಮ್ಯಾನೇಜ್‌ಮೆಂಟ್, ಭೋಪಾಲ್ ಎಂಬ ಪ್ರತಿಷ್ಟಿತ ಸಂಸ್ಥೆಯ ಸಹಯೋಗದೊಂದಿಗೆ ಸಕಾಲ ಯೋಜನೆಯನ್ನು ರಾಷ್ಟ್ರಾದ್ಯಂತ ಅನುಕರಣೀಯ ಮಾದರಿಯನ್ನಾಗಿ ರೂಪಿಸಿ ಅನುಷ್ಠಾನಗೊಳಿಸಲು ಮುಂದಾಗಿರುವುದು ಸಕಾಲಕ್ಕೆ ಸಂದ ಹೆಮ್ಮೆಯ ಗರಿ.

****